ಎಂದು ಪ್ರಾರಂಭದಲ್ಲಿ ವ್ಯಂಗ್ಯ ಮಾಡುತ್ತಲೇ, ಕವಿತೆಯ ಕೊನೆಗೆ 'ತೂರಿದ್ದು ತೂರಿ ಹೋಯ್ತು ಅವರಿಗೊಂದ ಹೊಸಾ ಜೋಡು ಕೊಡಸಿದರಾತಿಲ್ಲೊ? ಏನಂತೀರಿ?' ಎನ್ನುವಲ್ಲಿ ಚಪ್ಪಲಿ ಸೃಷ್ಟಿಸಿದ ಆ ಗೊಂದಲ, ಪೇಪರ್‌ಗಳ ಬೊಬ್ಬೆ, ಸಾರ್ವಜನಿಕರ ಊಹಾಪೋಹಗಳಿಗೆ, 'ಕುತನಿ ಅರವ್ಯಾಗ ಚಪ್ಪಲಿಯಿಟ್ಟು ಹೊಡದಂಗ' ಉತ್ತರ ನೀಡಿದ್ದು ಯಾವ ಕಾಲಕ್ಕೂ ಸಮಂಜಸ.

ಚಪ್ಪಲಿ ಎಂದೊಡನೇ ನಂಗೆ ನೆನಪಾಗೋದು ಶನಿಯನ್ನು ಮೆಟ್ಟಿ ನಿಂತ ಹನುಮಂತ ದೇವರು. ರಾಣೆಬೆನ್ನೂರು ತಾಲ್ಲೂಕಿನ ಕದರಮಂಡಲಗಿ ಕಾಂತೇಶ ಸ್ವಾಮಿಗೆ ವರುಷಕ್ಕೊಮ್ಮೆ ಹೊಸ ಚಪ್ಪಲಿ ತಯಾರಾಗಿ ಬರುವುದು ಅಲ್ಲಿಯ ವಿಶೇಷ. ನಾವು ಮನುಷ್ಯರು ತೊಡುವ ಅಂದರೆ, ಗಂಡಸರ ಚಪ್ಪಲಿಯಲ್ಲಿ ಅತೀ ದೊಡ್ಡ ಸಂಖ್ಯೆ ಎಂದರೆ, ಹದಿಮೂರು ನಂಬರ್. ಅಗಲ ನಾಲ್ಕೊ ಅಥವಾ ತುಸು ಹೆಚ್ಚೆಂದರೆ, ಐದೋ ಇರಬೇಕು. ಆದರೆ, ಅದರ ದುಪ್ಪಟ್ಟು ಉದ್ದವಾದ ಮತ್ತು ಅಗಲವಾದ ಜರಿ, ಕುಚ್ಚು, ಚಂದನೆಯ ಉಂಗುಷ್ಟದಿಂದ ಅಲಂಕಾರಗೊಂಡ ಚಪ್ಪಲಿಗಳನ್ನು ವರುಷಕ್ಕೊಮ್ಮೆ ಮೋಚಿಗ ಕುಲದವರು ಮಾಡಿಕೊಂಡು ಬಂದು ಇಲ್ಲಿ ತಂದಿರಿಸುತ್ತಾರೆ. ಒಂದು ಬಾರಿ ತಂದಿರಿಸಿದ ಚಪ್ಪಲಿ ವರುಷ ಕಳೆಯುವುದರೊಳಗೆ ಸವೆಯುತ್ತವೆ. ಹಾಗಾಗಿ, ಮತ್ತೆ ಹೊಸದಾಗಿ ತಯಾರಿಸಿದ ಕೊಲ್ಲಾಪುರ ಮಾದರಿಯ ಝುರಕಿ ಚಪ್ಪಲಿ ಹನುಮಂತನಿಗಾಗಿ ಮೀಸಲು. ಹನುಮ ದೇವರು ಭಕ್ತರ ಕೈಯಲ್ಲಿ 'ಮಾನವ'ನಾದನೋ, ಇಲ್ಲವೆ ದೇವರು ರಾತ್ರಿ ಊರ ರಕ್ಷಣೆಗೆಂದು ಚಪ್ಪಲಿ ಮೆಟ್ಟಿ ಊರನ್ನೆಲ್ಲಾ ಸುತ್ತಿ ಗಸ್ತು ತಿರುಗುವನೋ ಅದು ಭಕ್ತರೆಲ್ಲರ ವಿವೇಚನೆಗೆ ಬಿಟ್ಟ ವಿಚಾರ. ಆದರೆ, ಆ ಚಪ್ಪಲಿಯನ್ನು ನೋಡಲೆಂದೇ ದೂರದಿಂದ ಜನ ಕದರಮಂಡಲಗಿ ಕಾಂತೇಶ ಸ್ವಾಮಿ ದರ್ಶನಕ್ಕೆ ಬರುತ್ತಾರೆ ಎನ್ನುವುದು ಮಾತ್ರ ಸತ್ಯ.

ತೊಂಬತ್ತರ ದಶಕ. ನಾನಾಗ ನಾಲ್ಕನೆಯ ಇಯತ್ತೆ ಓದುತ್ತಿದ್ದೆ. ಟಾಯ್‌ಫಾಯಿಡ್ ಜ್ವರದ ಹಾವಳಿ ಜೋರಿತ್ತು.

